# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 01/2020**

**ದೋ.ಸಾ. : 08 ಪ್ರಾ.ಸಾ. : 03**

| | | |
|---|---|---|
| ಸಾಕ್ಷಿಯ ಹೆಸರು | : | ಗಣಪತಿ ವೆಂಕಟ್ರಮಣ ನಾಯಕ |
| ತಂದೆಯ ಹೆಸರು | : | ವೆಂಕಟ್ರಮಣ ನಾಯಕ |
| ವಯಸ್ಸು | : | 59 ವರ್ಷ |
| ಕೆಲಸ | : | ಪೊಲೀಸ್ ಪೇದೆ, ಕುಮಟಾ ಪೊಲೀಸ್ ಠಾಣೆ |
| ವಾಸ | : | ಕುಮಟಾ |

**ದಿನಾಂಕಃ 28-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಜೂನ್ 2010 ರಿಂದ ಜುಲೈ 2017 ರ ವರೆಗೆ ನಾನು ಗೋಕರ್ಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ 1 ನಮ್ಮ ಠಾಣೆಯ ಪಿ.ಎಸ್.ಆಯ್ ಆಗಿದ್ದರು. ದಿಃ 29-11-2013 ರ ಬೆಳಿಗ್ಗೆ ಚಾಸಾ 1 ರವರು ನನಗೆ ಮತ್ತು ಚಾಸಾ 4, 5, 8 ಹಾಗೂ 10 ರವರಿಗೆ ಒಂದು ಬಾತ್ಮಿ ಬಂದಿರುತ್ತದೆ ಎಂದು ಹೇಳಿ, ದಾಳಿ ಮಾಡಬೇಕೆಂದು ತಿಳಿಸಿರುತ್ತಾರೆ. ಅದರಂತೆ ನಾವು ಆ ದಿನ ಬೆಳಿಗ್ಗೆ 7.50 ಗಂಟೆಗೆ ಇಲಾಖಾ ಜೀಪ್ ನಲ್ಲಿ ಠಾಣೆಯಿಂದ ಹೊರಟು, ಗೋಕರ್ಣದ ಮೇಲಿನ ಕೇರಿಯ ಮಾರ್ಗವಾಗಿ ಓಂ ಬೀಚ್ ರಸ್ತೆಗೆ ಹೋಗುವಾಗ, ನೀರು ಹಳ್ಳ ಕ್ರಾಸ್ ಬಳಿ ಆಲದ ಮರದ ಹತ್ತಿರ ನೋಡಿದಾಗ, ಬಾತ್ಮಿಯಂತೆ ದರೋಡೆ ಮಾಡಲು 6 ಜನ ವ್ಯಕ್ತಿಗಳು 2 ವಾಹನಗಳನ್ನು ನಿಲ್ಲಿಸಿಕೊಂಡು, ನಿಂತಿರುವುದು ಕಾಣಿಸಿರುತ್ತದೆ. ತದನಂತರ ನಾವು ನಮ್ಮ ವಾಹನವನ್ನು ಸದರಿ ಸ್ಥಳದಿಂದ 100 ಮೀ ದೂರ ಮರೆಯಲ್ಲಿ ನಿಲ್ಲಿಸಿ, ಅಲ್ಲಿಗೆ ನಡೆದುಕೊಂಡು ಹೋಗಿರುತ್ತೇವೆ. ಅಲ್ಲಿ ಹೋಗಿ ನೋಡಿದಾಗ, ಆರೋಪಿತರು ದರೋಡೆ ಮಾಡುವ ಉದ್ದೇಶದಿಂದ ಕೈಯಲ್ಲಿ ಕಬ್ಬಿಣದ ರಾಡ್, ದೊಣ್ಣೆ ಹಾಗೂ ಹಗ್ಗವನ್ನು ಹಿಡಿದುಕೊಂಡಿದ್ದರು ಹಾಗೂ ಅವರು ನಮ್ಮನ್ನು ನೋಡುತ್ತಲೇ ಓಡಿ ಹೋಗಲು ಪ್ರಯತ್ನ ಪಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು

ಚಾಸಾ–1 ರವರು 1 ನೇ ಆರೋಪಿಯನ್ನು ಹಿಡಿದುಕೊಂಡೆವು ಹಾಗೂ ಚಾಸಾ 4 ಹಾಗೂ ಚಾಸಾ 9 ರವರು 2 ನೇ ಆರೋಪಿಯನ್ನು ಹಿಡಿದುಕೊಂಡರು, ಆದರೆ ಉಳಿದ 4 ಜನ ಆರೋಪಿಗಳು ತಪ್ಪಿಸಿಕೊಂಡರು. ನಮ್ಮ ಜೊತೆ ಇದ್ದ ಉಳಿದ ಸಿಬ್ಬಂದಿಗಳು ತಪ್ಪಿಸಿಕೊಂಡು ಹೋಗುತ್ತಿದ್ದ ಆರೋಪಿಗಳನ್ನು ಬೆನ್ನಟ್ಟಿದ್ದರೂ ಸಹ ಅವರು ಸಿಕ್ಕಿರುವುದಿಲ್ಲ. ಸದರಿ ಸ್ಥಳದಲ್ಲಿ ನಮ್ಮ ಕೈಗೆ ಸಿಕ್ಕ 1 ಮತ್ತು 2 ನೇ ಆರೋಪಿಗಳ ಪೈಕಿ, 1 ನೇ ಆರೋಪಿಯ ಬಲಗೈಯಲ್ಲಿ ಒಂದು ಕಬ್ಬಿಣದ ರಾಡ್ ಇತ್ತು ಹಾಗೂ ಆತನ ಅಂಗ ಶೋಧನೆ ಮಾಡಿದಾಗ, ಅವನ ಪ್ಯಾಂಟಿನ ಜೇಬಿನಲ್ಲಿ ಒಂದು ನೊಕಿಯಾ ಮೊಬೈಲ್, ನಗದು ಹಣ ರೂ.1,000/–ಗಳು ಸಿಕ್ಕಿರುತ್ತದೆ, 2 ನೇ ಆರೋಪಿಯ ಬಲಗೈಯಲ್ಲಿ ಒಂದು ಕಟ್ಟಿಗೆಯ ದೊಣ್ಣೆ ಹಾಗೂ ಆತನ ಪ್ಯಾಂಟಿನ ಜೇಬಿನಲ್ಲಿ ಒಂದು ನೊಕಿಯಾ ಮೊಬೈಲ್, ನಗದು ಹಣ ರೂ.1,200/–ಗಳು ಸಿಕ್ಕಿರುತ್ತದೆ. ಆರೋಪಿತರು ದರೋಡೆ ಮಾಡಲು ತಂದಿದ್ದ 1 ಮಹಿಂದ್ರಾ ಕಾರು ಮತ್ತು ಇನ್ನೊಂದು ಮಾರುತಿ ಓಮಿನಿಗಳನ್ನು ಪರಿಶೀಲೀಸಲಾಗಿ, ಮಹಿಂದ್ರಾ ಕಾರಿನಲ್ಲಿ ಹಿಂಬದಿ ಸೀಟು ಇರಲಿಲ್ಲ, ಆದರೆ ಅದರಲ್ಲಿ ಖಾರದ ಪುಡಿಯ ಡಬ್ಬ, ಮಪ್ಲರ್ ಹಾಗೂ ದೊಣ್ಣೆಗಳು ಇದ್ದವು. ಅದೇ ರೀತಿ ಮಾರುತಿ ಓಮಿನಿ ಕಾರಿನಲ್ಲಿ ಕಟ್ಟಿಗೆಯ ದೊಣ್ಣೆ, ಪ್ಲಾಸ್ಟಿಕ್ ಕವರಿನಲ್ಲಿ ಖಾರದ ಪುಡಿ ಮತ್ತು ಹಗ್ಗ ಇತ್ತು ಹಾಗೂ ಒಂದು ಗಮ್ ಟೇಪ್ ಸಹ ಇತ್ತು. ಸ್ದ್ರಿ ವಾಹನಗಳಲ್ಲಿ ವಾಹನದ ದಾಖಲೆಗಳು ಸಹ ಇದ್ದವು. ಸೆರೆ ಸಿಕ್ಕ ಆರೋಪಿತರನ್ನು ವಿಚಾರಿಸಿದಾಗ, ಅವರು "ಸ್ದ್ರಿ ಜಾಗಕ್ಕೆ ವಿದೇಶಿಗರು ಮತ್ತು ಪ್ರವಾಸಿಗರು ಬರುವುದರಿಂದ ಅವರಿಂದ ದರೋಡೆ ಅಥವಾ ಸುಲಿಗೆ ಮಾಡುವ ಉದ್ದೇಶದಿಂದ ಪೂರ್ವಸಿದ್ಧತೆ ಮಾಡಿಕೊಂಡು ಬಂದಿದ್ದೆವು" ಎಂದು ಹೇಳಿರುತ್ತಾರೆ.

2. ನಂತರ ಚಾಸಾ 1 ರವರು ಸ್ಥಳದಲ್ಲಿ ಸಿಕ್ಕ ಆರೋಪಿತರನ್ನು ವಶಕ್ಕೆ ಪಡೆದು ಹಾಗೂ ಆರೋಪಿತರು ಕೃತ್ಯಕ್ಕೆ ಎಸಗಲು ತಂದಿದ್ದ ವಾಹನ ಮತ್ತು ವಸ್ತುಗಳನ್ನು ಪಂಚನಾಮೆ ಮೂಲಕ ಜಪ್ತುಪಡಿಸಿಕೊಂಡಿರುತ್ತಾರೆ. ಸದರಿ ಜಪ್ತು ಪಂಚನಾಮೆಯನ್ನು ಚಾಸಾ–2 ಮತ್ತು 3 ರವರ ಹೇಳಿಕೆಯಂತೆ ಚಾಸಾ–4 ರವರು ಬರೆದಿರುತ್ತಾರೆ. ತದನಂತರ ಆರೋಪಿತರು ಹಾಗೂ ಮುದ್ದೆ ಮಾಲುಗಳು ಕಾಣುವ ಹಾಗೆ ಒಂದು ಫೋಟೋ ಸಹ ತೆಗೆದಿರುತ್ತಾರೆ. ಪಂಚನಾಮೆಯ ಕಾಲದಲ್ಲಿ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ. ತದನಂತರ, ಆರೋಪಿಗಳು ಮತ್ತು ಜಪ್ತು ಪಡಿಸಿಕೊಂಡ ಮಾಲುಗಳ ಸಮೇತ ಠಾಣೆಗೆ ಬಂದು, ಚಾಸಾ–1 ರವರು ಫಿರ್ಯಾದು ನೀಡಿ, ಆರೋಪಿ ಮತ್ತು ಮುದ್ದೆ ಮಾಲುಗಳನ್ನು ಠಾಣಾಧಿಕಾರಿಗೆ ನೀಡಿರುತ್ತಾರೆ. ಈ ಬಗ್ಗೆ ನಾನು ನಮ್ಮ ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಓಡಿ ಹೋದ

ಆರೋಪಿಗಳ ಬಗ್ಗೆ ನಮ್ಮ ಸಿಬ್ಬಂದಿಗಳಾದ ಚಾಸಾ–6 ಮತ್ತು 7 ರವರು ಚಾಸಾ 1 ರವರಿಗೆ ಮಾಹಿತಿ ನೀಡಿದ್ದು, ಸದರಿ ವಿಷಯವನ್ನು ಕೇಳಿ ತಿಳಿದುಕೊಂಡ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಮರು ಹೇಳಿಕೆ ನೀಡಿರುತ್ತೇನೆ.

3. ಆರೋಪಿಗಳನ್ನು ಹಾಗೂ ಮುದ್ದೆ ಮಾಲುಗಳನ್ನು ವಶಕ್ಕೆ ಪಡೆದ ಸ್ಥಳದಲ್ಲಿ ಚಾಸಾ–1 ರವರು ಮಾಡಿದ ಜಪ್ತು ಪಂಚನಾಮೆ ಹಾಗೂ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ನಕಾಶೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–5 ಎಂದು ಗುರುತಿಸಲಾಯಿತು. ಆರೋಪಿತರು ಕೃತ್ಯ ಎಸಗಲು ತಂದಿದ್ದ, ಮಹೀಂದ್ರಾ ಕಾರ್ ಹಾಗೂ ಮಾರುತಿ ಓಮಿನಿ ಕಾರ್ ನ್ನು ನಿಪಿ–3 ಮತ್ತು 4 ಪೋಟೋಗಳಲ್ಲಿ ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯಿಂದ ಜಪ್ತು ಪಡಿಸಿಕೊಂಡ ಕಬ್ಬಿಣದ ರಾಡ್ ನ್ನು ಈಗಾಗಲೇ ಮು.ಮಾ–1 ಎಂದು, ಮೊಬೈಲ್ ನ್ನು ಮು.ಮಾ–2 ಎಂದು, ನಗದು ಹಣ ರೂ.1,000/– ಗಳನ್ನು ಮು.ಮಾ–3 ಎಂದು (100 ರೂಪಾಯಿಯ ಹಳೆಯ 5 ನೋಟುಗಳು ಮತ್ತು 500 ರೂಪಾಯಿಯ ಹಳೆಯ 1 ನೋಟು), 2 ನೇ ಆರೋಪಿಯಿಂದ ಜಪ್ತು ಪಡಿಸಿಕೊಂಡ ಕಟ್ಟಿಗೆಯ ದೊಣ್ಣೆಯನ್ನು ಮು.ಮಾ–4 ಎಂದು, ನೊಕಿಯಾ ಮೊಬೈಲ್ ನ್ನು ಮು.ಮಾ–5 ಎಂದು, ನಗದು ಹಣ ರೂ.1,200/–ಗಳನ್ನು ಮು.ಮಾ–6 ಎಂದು (100 ರೂಪಾಯಿಯ ಹಳೆಯ 7 ನೋಟುಗಳು ಮತ್ತು 500 ರೂಪಾಯಿಯ ಹಳೆಯ 1 ನೋಟು) ಎಂದು, 2 ಬಿಳಿ ಬಣ್ಣದ ಹಗ್ಗಗಳನ್ನು ಮು.ಮಾ–7 ಎಂದು, 3 ಕಟ್ಟಿಗೆ ದೊಣ್ಣೆಗಳನ್ನು ಮು.ಮಾ–8 ಎಂದು, ಖಾರದ ಪುಡಿಯ ಪ್ಲಾಸ್ಟಿಕ್ ಡಬ್ಬವನ್ನು ಮು.ಮಾ–9 ಎಂದು, 2 ಮಫ್ಲರಗಳನ್ನು ಮು.ಮಾ–10 ಎಂದು, ಖಾರದ ಪುಡಿ ಇರುವ ಪ್ಲಾಸ್ಟಿಕ್ ಕವರನ್ನು ಮು.ಮಾ–11 ಎಂದು, 1 ಗಮ್ ಟೇಪನ್ನು ಮು.ಮಾ–12 ಎಂದು, ಮಹಿಂದ್ರಾ ವಾಹನದ ಕಾಗದ ಪತ್ರಗಳನ್ನು ಮು.ಮಾ–13 ಎಂದು, ಮಾರುತಿ ಓಮಿನಿ ಕಾರಿನ ದಾಖಲೆಗಳನ್ನು ಮು.ಮಾ–14 ಎಂದು ಗುರುತಿಸಲಾಗಿರುತ್ತದೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ